ಕುಡಿಯಲು ಬಯಸಿದ್ದಲ್ಲದೇ, ಅದೇ 'ಬೈಟು ಕಾಫಿ' ಶೀರ್ಷಿಕೆಯಡಿಯಲ್ಲಿ ಸೆಲೆಬ್ರಿಟಿಗಳನ್ನು ಕರೆಸಿ ಸಂದರ್ಶನ, ಸಂವಾದ ಏರ್ಪಡಿಸುವಂತೆ ಒತ್ತಾಯಿಸಿದರು. ನನ್ನೊಡನೆ ಬೈಟು ಕಾಫಿ ಕುಡಿಯುತ್ತ, ಹೊಸ ಸಿನಿಮಾಗಳ ಬಿಡುಗಡೆಯ ಪ್ರಮೋಷನ್‌ಗೆಂದು ಬರುತ್ತಿದ್ದ ನಟರು, ನಿರ್ದೇಶಕರು ಲೈವ್ ಆಗಿಯೇ ನನ್ನ ಅಂದ, ನನ್ನ ನಗೆ, ನನ್ನ ಡೈಲಾಗ್ ಡೆಲಿವರಿಗಳನ್ನು ವರ್ಣಿಸುತ್ತ, ಚಲನಚಿತ್ರಗಳ ಕಡೆಗೆ ನನ್ನ ಒಲವು ಬರುವಂತೆ ಪ್ರಚೋದಿಸಲಾರಂಭಿಸಿದರು. ನನಗೆ ನಟನೆ ಬರುವುದಿಲ್ಲ ಎಂಬ ನನ್ನ ವೀಕ್‌ನೆಸ್ ಅನ್ನು ಅನೇಕ ಸಲ ಹೇಳಿದ್ದೆ. ಆದರೆ, 'ಯಾವ ನಟಿಗೆ ತಾನೆ ನಟನೆ ಬರುತ್ತೆ ಹೇಳಿ ಮೇಡಂ' ಎಂದು ಮಾತಿನ ಮಧ್ಯೆ ಒಬ್ಬ ನಿರ್ದೇಶಕ ಹೇಳಿದ್ದು ದೊಡ್ಡ ವಿವಾದವಾಗಿ ಪರಿಣಮಿಸಿತು. ಇದನ್ನೇ ಕಾಯುತ್ತಿದ್ದವರಂತೆ ನನ್ನ ಸ್ಪರ್ಧಿ ಎಫ್.ಎಂ.ನವರೆಲ್ಲ ಅದನ್ನು ಚ್ಯುಯಿಂಗ್‌ಗಮ್‌ನಂತೆ ಕಚಕಚ ಅಗೆದರು. ಪತ್ರಿಕೆಯವರು, ದೃಶ್ಯ ಮಾಧ್ಯಮದವರೂ ಅದನ್ನು ಎಲಾಸ್ಟಿಕ್‌ನಂತೆ ಹಿಂಜಿಹಿಂಜಿ ಜಗ್ಗಾಡಿದರು. ಹತ್ತಾರು ಸುಪ್ರಸಿದ್ಧ ನಟಿಯರು ಆ ನಿರ್ದೇಶಕನ ವಿರುದ್ಧವಿರಲಿ, ನನ್ನ ವಿರುದ್ಧವೇ ಹರಿಹಾಯ್ದು, 'ಯಾವಳವಳು ಆವಂತಿಕಾ... ರೇಡಿಯೋದಲ್ಲಿ ಮಾತಾಡಿದ ಮಾತ್ರಕ್ಕೆ ಅವಳೇನು ರಂಭೆಯೋ, ಊರ್ವಶಿಯೋ...' ಎಂಬಲ್ಲಿಂದ ಆರಂಭಿಸಿ, 'ನನ್ನಲ್ಲಿಲ್ಲದ್ದು ಅವಳಲ್ಲೇನಿದೆ, ಅವಳು ನಮ್ಮ ಕ್ಷೇತ್ರಕ್ಕೆ ಬರಲಿ, ಅವಳ ....ನ್ನೆಲ್ಲ ಹರಿದುಹಾಕಿಬಿಡುತ್ತೇನೆ...' ಎಂದು ನಂಬರ್ ಒನ್ ನಟಿ ಆರ್ಭಟಿಸಿಯೇ ಬಿಟ್ಟದ್ದನ್ನು 'ಕುಂಯ್...' ಎಂಬ ಬೀಪ್‌ಸೌಂಡನ್ನು ಓವರ್‌ಲ್ಯಾಪ್ ಮಾಡಿ, ಎಲ್ಲ ಚಾನೆಲ್‌ನವರೂ ಪ್ರಸಾರಿಸಿದರು. ಗಣ್ಯಾತಿಗಣ್ಯರನ್ನು ಕರೆಸಿ, ಪ್ಯಾನೆಲ್ ಡಿಸ್ಕಷನ್ ಆರಂಭಿಸಿಬಿಟ್ಟರು. ನಾನು ಇದೇನಾಗಿಬಿಟ್ಟಿತೋ ಎಂದು ಗಾಬರಿಬಿದ್ದು, ವಾರವಾದರೂ ಆಫೀಸಿನ ಕಡೆಗೆ ತಲೆಹಾಕಲಿಲ್ಲ. ಯಾರೋ ನನ್ನನ್ನು ಫಾಲೋ ಮಾಡುತ್ತಿರುವಂತೆ, ಯಾವುಯಾವುದೋ ರೂಪದಲ್ಲಿ ಕೊಲ್ಲಲು ಹವಣಿಸುತ್ತಿರುವಂತೆ ಭಾಸವಾಗಲಾರಂಭಿಸಿತು. ನನ್ನ ಡೆಲಿವರಿ ಸಮಯದಲ್ಲಿ ಬಿಟ್ಟರೆ ಒಂದು ದಿನವೂ ನನ್ನ ಶೋವನ್ನು ತಪ್ಪಿಸಿಕೊಳ್ಳದಿದ್ದ ನಾನು ಹೀಗೆ ಏಕಾಏಕಿ ತಲೆತಪ್ಪಿಸಿಕೊಂಡಿದ್ದನ್ನು ಖಂಡಿಸಿದ ಕಾರ್ಯಕ್ರಮದ ಪ್ರೊಡ್ಯೂಸರ್, ಅತ್ತ ನನ್ನದೇ ಹಳೆಯ ಕಾರ್ಯಕ್ರಮದ ರೆಕಾರ್ಡಿಂಗ್‌ಗಳನ್ನು ಹಾಕಿ ಇತ್ತ ಮನೆಗೇ ಹುಡುಕಿಕೊಂಡು ಬಂದ. 'ಇದರಿಂದ ನಿಮ್ಮ ಟಿ.ಆರ್.ಪಿ. ಜಾಸ್ತಿ ಆಗಿದೆರೀ' ಎಂದು ಪ್ರೀತಿಯಿಂದ ರೇಗಿಸಿ, 'ಸಾಮಾಜಿಕ ಜೀವನದಲ್ಲಿ ಇರುವವರಿಗೆ ಇವೆಲ್ಲ ಕಾಮನ್.. ನಿಮ್ಮ ಉದ್ಯೋಗದಲ್ಲಿ ಸ್ಥಿರತೆ ಮತ್ತು ಬದ್ಧತೆಯನ್ನು ಕಾಯ್ದುಕೊಳ್ಳಬೇಕು' ಎಂದು ಬುದ್ಧಿವಾದ ಹೇಳಿ ನಾಳೆಯಿಂದಲೇ ಡ್ಯೂಟಿಗೆ ಬರುವಂತೆ ತಾಕೀತುಮಾಡಿ ಹೋದ.

ಯಾಕೋ ಗೊತ್ತಿಲ್ಲ, ಮುಂದಿನ ದಿನಗಳಲ್ಲಿ ಯಾರಾದರೂ ಕಾಲರ್, ಏನಾದರೂ ವಿವಾದಾತ್ಮಕ ವಿಷಯ ಮಾತಾಡಿದರೆ ಸಾಕು, ನಾನು ಆನ್‌ಏರ್ ರೇಗಿಬಿಡುತ್ತಿದ್ದೆ – ಯಾಕೋ ನನ್ನಿಂದ ಅದನ್ನು ತಡೆದುಕೊಳ್ಳಲು ಸಾಧ್ಯವೇ ಇಲ್ಲ ಎನ್ನುವಂತೆ. ಏಳೆಂಟು ವರ್ಷ ನಾನ್‌ಕಾಂಟ್ರೊವರ್ಷಿಯಲ್ ಆಗಿದ್ದವಳು ನನ್ನ ನಿರಂತರತೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗದೇ, ಏನೇನೋ ಮಾತಾಡಿ ವಿವಾದಗಳನ್ನು ಮೈಮೇಲೆ ಎಳೆದುಕೊಳ್ಳುತ್ತಿದ್ದೆ. 'ಇದು ಒಂಥರ ಜೈಲಿಗೆ ಹೋಗಿಬಂದವರದ್ದರಂತೆ, ಮೊದಲ ಬಾರಿ ಹೋಗಲು ಭಯ, ಆಮೇಲೆ ಅದೇ ರೂಢಿ ಆಗಿಹೋಗುತ್ತದಂತಲ್ಲ, ಹಾಗೆ...' ಎಂದು ಆ ಪ್ರೊಡ್ಯೂಸರ್ ಆಗಾಗ ಕಿಚಾಯಿಸುತ್ತಿದ್ದ. ಕೆಲವರು, ಸದಾ ವಿವಾದದಲ್ಲಿ ಇದ್ದರೆ ತಾನೆ ತಾವು ಖ್ಯಾತರಾಗಲು ಸಾಧ್ಯ ಅಂತ ನಂಬಿರುತ್ತಾರಂತೆ. ನಿಜ. ನಾನೂ ಅನೇಕ ಲೇಖಕರನ್ನು ನೋಡಿದ್ದೇನೆ. ತಮ್ಮ ಕೈಯಲ್ಲಿ ಇನ್ನು ಬರೆಯೋಕೆ ಸಾಧ್ಯವಿಲ್ಲ ಅಂತಾದಾಗಲೇ, ಅಲ್ಲಿ ಇಲ್ಲಿ ಭಾಷಣದಲ್ಲಿ ಏನಾದರೂ ಸ್ಟೇಟ್‌ಮೆಂಟ್ ಕೊಟ್ಟು ಆ ಮೂಲಕ ಮಾಧ್ಯಮಗಳಲ್ಲಿ ತಮ್ಮ ಹೆಸರು ಜೀವಂತವಿರಿಸಿಕೊಳ್ಳಲು ಪ್ರಯತ್ನಿಸುತ್ತಾರೆ – ಸೂಳೆ, ಮುದುಕಿ ಆದಮೇಲೆ ಗರತಿ ಆದಳು ಅಂತಾರಲ್ಲ... ಹಾಗೆ!

ನನ್ನ ಸಿಡುಕು ಸ್ವಭಾವ ಕ್ರಮೇಣ ಮನೆಗೂ ವಿಸ್ತರಿಸಿದ್ದು ನನಗೆ ಗೊತ್ತಾಗಲೇ ಇಲ್ಲ. ಚಿರಂತನ್ ಮತ್ತೆ ಮತ್ತೆ ಎಚ್ಚರಿಸುತ್ತ ಹೋದ. 'ನಾನು ಏನು ತಪ್ಪು ಮಾಡಿದೀನಿ, ನನ್ನ ಮೇಲೆ ನಿಮಗೆ ಪ್ರೀತಿ ಕಡಿಮೆಯಾಗಿದೆ. ಅದಕ್ಕೇ ಸುಮ್ಮಸುಮ್ಮನೇ ಆಪಾದನೆ ಮಾಡ್ತಾ ಇದ್ದೀರ...' ಎಂದು ಮತ್ತೆ ಮತ್ತೆ ಕೂಗಾಡುತ್ತಿದ್ದೆ. ಒಂದನೇ ಕ್ಲಾಸು ಓದುತ್ತಿದ್ದ ಮಗ ಪುಷ್ಪಕ್‌ನೂ, 'ಅಮ್ಮಾ, ಇನ್ನೊಂದ್ಸಲ ಹಿಂಗೇ ಬೈದರೆ ನಾನು ಓದೋದೇ ಇಲ್ಲ, ಅದೇನು ಮಾಡ್ಕೋತಿಯೋ ಮಾಡ್ಕೋ...' ಎಂದುಬಿಟ್ಟ. 'ನೋಡ್ರೀ, ನಿಮ್ಮ ಮಗನಿಗೂ ನಿಮ್ಮದೇ ಚಾಳಿ ಶುರುವಾಗಿದೆ. ಅವನನ್ನು ಸಿಕ್ಕಾಪಟ್ಟೆ ಉಬ್ಬಿಸಿ ಬಿಟ್ಟಿದ್ದೀರ... ನಾಳೆ ಅವನ ಸ್ಕೂಲಲ್ಲಿ ಪೇರೆಂಟ್ಸ್ ಮೀಟಿಂಗ್ ಕರೆದ್ರೇ ನೀವೇ ಹೋಗ್ಬೇಕು. ನಾನಂತೂ ಬರಲ್ಲ' ಎಂದು ಎದ್ದುಹೋಗಿದ್ದೆ. ಅದೇ ಬಿಸಿಯಲ್ಲಿ ಲೈವ್ ಕಾರ್ಯಕ್ರಮ ಮಾಡುವಾಗ ಯಾಕೋ ನನ್ನಿಂದ ಕಾನ್‌ಸೆಂಟ್ರೇಟ್ ಮಾಡೋಕಾಗ್ತಾಯಿಲ್ಲ ಅಂಥ ನನಗೇ ಅನಿಸ್ತಿತ್ತು. ಕಂಪ್ಲೇಂಟ್ ಸೀದಾ ಚೀಫ್‌ಗೆ ತಲುಪಿ ಅವರ ಚೇಂಬರ್‌ಗೆ ಕರೆಸಿದರು. ಪೆರುಮಾಳ್, 'ಮೇಡಂ, ಸುಮಾರು ಹನ್ನೆರಡು ವರ್ಷಗಳಿಂದ ನಮ್ಮ ಎಫ್.ಎಂ.ನಲ್ಲಿ ಕೆಲಸ ಮಾಡ್ತಾ ಇದ್ದೀರಿ. ಈಗಿನ ಕಾಲದಲ್ಲಿ ಎರಡು–ಮೂರು ವರ್ಷದ ಮೇಲೆ ಒಂದೇ ಕಡೆ ಕೆಲಸ ಮಾಡೋರು ಬಹಳ ಕಡಿಮೆ. ಹಾಗಾಗಿ ನಿಮ್ಮ ಬಗ್ಗೆ ನಮಗೆ ತುಂಬಾ ಗೌರವ. ಆದರೆ ಜನ ಚೇಂಜ್ ಕೇಳ್ತಾ ಇದ್ದಾರೆ...' ಅಂದ ಸೂಚ್ಯವಾಗಿ. 'ಅಂದರೆ ಕೆಲಸ ಬಿಡ್ರೀ, ಇಲ್ಲ ಕಿತ್ತಾಕ್ತೀವಿ ಅಂಥಾನ ನಿಮ್ಮ ಮಾತಿನ ಅರ್ಥ? ಏ... ನೀನೇನು ಕಿತ್ತಾಕೋದು. ನಾನೇ ರಾಜೀನಾಮೆ ಬಿಸಾಕ್ತೀನಿ ತಗೋ...' ಅಂತ ಅವನ ಟೇಬಲ್ ಮೇಲೇ ಇದ್ದ ಪೆನ್ನು ಪೇಪರ್ ತಗೊಂಡು, ಸಿಟ್ಟಿನಿಂದ ನಡುಗುತ್ತಿದ್ದ ಕೈಯಿಂದ ಎರಡೇ ಸಾಲಿನಲ್ಲಿ ರಾಜೀನಾಮೆ ಬರೆದು, ಪೆನ್ನು–ಪೇಪರನ್ನು ಟೇಬಲ್ ಮೇಲಕ್ಕೆ ಬಿಸಾಕಿ, ಅದು ಎಲ್ಲಿ ನಿಲ್ತು ಅನ್ನೋದನ್ನೂ ನೋಡದೆ, ಕೂತಿದ್ದ ಚೇರನ್ನು ದಢಾರಂಥ ಹಿಂದಕ್ಕೆ ತಳ್ಳಿ, ಅದು ಹಿಂದಿನ ಗೋಡೆಗೆ ತಗುಲಿ ಪುಟಿದದ್ದನ್ನ ನೋಡಿದರೂ ನೋಡದಂಗೆ ಸೀದಾ ಮನೆಗೆ ನಡೆದೆ.

'ಏನಾಗಿದೆ ನಿನಗೆ?' ಅಂದ ಚಿರಂತನ್, 'ಬಹುಶಃ ಸ್ವಲ್ಪ ಬದಲಾವಣೆ ಬೇಕು ಅನ್ನಿಸಿರಬೇಕು ನಿನಗೆ, ಬಾ' ಅಂಥ, ಊಟಿ–ಕೊಡೈಕೆನಾಲ್‌ಗೆ ಕರೆದುಕೊಂಡು ಹೋದ, ಪಾಪ. ಮೂರು ದಿನ ಅಲ್ಲೇ ಇದ್ದು ಅಲ್ಲಿನ ತಂಪಾದ ವಾತಾವರಣದ ಆಹ್ಲಾದವನ್ನು ಸವಿದು ತಿಳಿಯಾದ ಮನಸ್ಸಿನೊಂದಿಗೆ ಮತ್ತೆ ವಾಪಸ್ಸು ಬಂದೆ.

ಮನೆಗೆ ಬಂದರೆ ಸಾಕು, ಏನೋ ಮಂಕು ಕವಿದಂತೆ. ಇಡೀ ಪ್ರಪಂಚವೇ ನನ್ನ ತಲೆ ಮೇಲೆ ಇರುವಂತೆ. ದೇಹದ ಮೇಲೊಂದು ಭಾರವಾದ ಅಂಗ ಇದೆ ಅಂಥ ಅನ್ನಿಸಿದ್ದು ಈಗಲೇ. ಒಂಥರ ಮೈಕೈ ನೋವು, ತಲೆಭಾರ, ಜಡ, ಆಲಸ್ಯ! 'ದೃಷ್ಟಿ ಆಗಿದೆ' ಅಂಥ ಅಮ್ಮ ಬಂದು ಪೊರಕೆ ನಿವಾಳಿಸಿ ಹೋದಳು. ಚಿರಂತನ್ ನನ್ನಿಂದಾಗಿ, ತನ್ನ ಆಫೀಸಿನಲ್ಲಿ ಕೆಲಸದ ಮೇಲೆ ಗಮನ ಕೇಂದ್ರೀಕರಿಸೋಕ್ಕೆ ಆಗ್ತಿಲ್ಲ ಅಂಥ ನೋಟಿಸ್ ಮಾಡಿರುವುದಾಗಿ ಪದೇಪದೇ ಹೇಳುತ್ತಿದ್ದ. 'ಹೀಗೇ ಆದರೆ ತನ್ನ ಕೆಲಸವೂ ಹೋಗೋದು ಗ್ಯಾರಂಟಿ. ಈಗ ನಿನಗೆ ಕೆಲಸ ಇಲ್ಲ, ಆಮೇಲೆ ನನಗೂ ಇಲ್ಲದಂಗೆ ಆಗುತ್ತೆ. ಕೊನೆಗೆ ಭಿಕ್ಷೆ ಬೇಡಬೇಕಾಗುತ್ತೆ, ತಿನ್ನೋಕ್ಕೆ...' ಎಂದು ವ್ಯಂಗ್ಯವಾಗಿ ಅಂದು ಹೋದ. ಅವನು ಮನೆಗೆ ಬರೋದನ್ನೇ ಕಾಯ್ತಾ ಇದ್ದೋಳಂಗೆ 'ನನ್ನಿಂದ ನೀನ್ಯಾಕೆ ಕೆಲ್ಸ ಕಳ್ಕೋಬೇಕು, ಸುಖವಾಗಿರು' ಅಂಥ ಡಿವೋರ್ಸ್ ಪೇಪರ್‌ನ್ನ ಅವನ ಮುಖದ ಮೇಲೆ ಬಿಸಾಕಿ, ಪುಷ್ಪಕ್‌ನನ್ನು ಎಳೆದುಕೊಂಡು ತವರಿಗೆ ಹೋಗಲು ಪ್ರಯತ್ನಿಸಿದೆ. ನನ್ನ ಕೆನ್ನೆಗೆ ಫಟಾರೆಂದು ಬಾರಿಸಿದ ಚಿರಂತನ್. ನಾನು ನಾಗರಹಾವಂತೆ ಸಿಡಿದುಬಿದ್ದೆ. ತಿರುಗಿ ಅವನ ಕೆನ್ನೆಗೆ ಹೊಡೆಯಲು ಯತ್ನಿಸಿದೆ. ಆದರೆ ಅವನೇ ಸಮಾಧಾನ ಮಾಡಿಕೊಂಡು, 'ಇಷ್ಟೊತ್ತಲ್ಲಿ ಬೇಡ, ಬೆಳಗ್ಗೆ ನಾನೇ ಕಳುಸ್ತೀನಿ ಬಾ' ಎಂದು ಪಕ್ಕದಲ್ಲಿ ಮಲಗಿಸಿಕೊಂಡು ಪುಸಲಾಯಿಸಿದ. ನಾನು ಸಿಡುಕಿ, ಪಕ್ಕಕ್ಕೆ ತಿರುಗಿ ಮುಸುಕೆಳೆದು ಮಲಗಿಕೊಂಡೆ.

ಮರುದಿನ ಡಾಕ್ಟರರ ಬಳಿಗೆ ನನ್ನನ್ನು ಕರೆದುಕೊಂಡು ಹೋದವನು, ನನ್ನ ಈವರೆಗಿನ ಉಪಟಳಗಳನ್ನೆಲ್ಲ ಸವಿವರವಾಗಿ ವಿವರಿಸಿದ. ತಾಳ್ಮೆಯಿಂದ ಆಲಿಸಿದ ಮನೋವೈದ್ಯ ಡಾ. ಸತೀಶ್ ಒಂದೆರಡು ಪರೀಕ್ಷೆಗಳನ್ನು ಮಾಡಿಸಲು ತಿಳಿಸಿದ. 'ಇದುವರೆಗೂ ನಿಮ್ಮನ್ನು ಕಾಡಿದ್ದು ಯಾವ ದೆವ್ವವೂ ಅಲ್ಲ, ಪಿಶಾಚಿಯೂ ಅಲ್ಲ. ನಿಮ್ಮ ಸುತ್ತಮುತ್ತಲಿರುವ ಮೊಬೈಲ್ ಟವರ್...' ಎಂಬ ಸ್ಫೋಟಕ ಸುದ್ದಿಯನ್ನು ಹೇಳಿಬಿಟ್ಟರು. 'ಅರೇ, ಹೌದೇ...' ಎಂದುಕೊಂಡು ನಮ್ಮ ಅಕ್ಕಪಕ್ಕದಲ್ಲಿರುವ ಟವರ್‌ಗಳನ್ನೆಲ್ಲ ಗುಣಿಸಲಾರಂಭಿಸಿದೆ. ನಿಜ. ನಮ್ಮ ಪಕ್ಕದ ಮನೆಯ ಮೇಲೆಯೇ ಇದೆ. ಇನ್ನೊಂದು ಅಷ್ಟು ದೂರದಲ್ಲಿದೆ. ಮತ್ತೊಂದು ನಾನು ಕೆಲಸ ಮಾಡುತ್ತಿದ್ದ ಬಿಲ್ಡಿಂಗ್ ಮೇಲೆಯೇ ಇತ್ತಲ್ಲವೇ... ಎಂದೆಲ್ಲ ಗಣಿಸಿ ಹೇಳಿದೆ. 'ನೋಡಿ, ನಿಮಗೆ ತಲೆನೋವು ಬರುತ್ತಿದ್ದುದು ಮೈಗ್ರೇನ್‌ನಿಂದಾಗಿ.